CLAUSES

Mr. SPEAKER.—Since there are no amendments, I will put the clauses to vote :

The question is :

"That clause 2 do stand part of the Bill."

The motion was adopted.

Clause 2 was added to the Bill.

Mr. SPEAKER.—The question is :

"That clause 1, the long title and the enacting formula do stand part of the Bill."

The motion was adopted.

Clause 1, the long title and the enacting formula were added to the Bill.

Motion to pass

Sri K. PUTTASWAMY.—Sir, I move :

"That the Mysore High Court (Amendment) Bill, 1969, be passed."

Mr. SPEAKER.—The question is :

"That the Mysore High Court (Amendment) Bill, 1969, be passed."

The motion was adopted.

Private Member's Business

(A) University of Technical Education Bill, 1969

Introduction.

Mr. SPEAKER.—Sri H. B. Jwalaniah to move for leave to introduce the University of Technical Education Bill, 1969.

ಶ್ರೀ ಎಚ್. ಬಿ. ಜ್ವಾಲನಯ್ಯ.—ಸ್ವಾಮಿ, ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ವಿಧೇಯಕ, 1969—ಇದನ್ನು ಮಂಡಿಸಲು ನಾನು ಈ ಸಭೆಯ ಅನುಮತಿಯನ್ನು ಬೇಡುತ್ತೇನೆ.

5-30 P.M.

Mr. SPEAKER.—The question is :

"That leave be granted to introduce the University Technical Education Bill, 1969."

Hon. Members :—Yes.

Mr. SPEAKER.—The leave is granted.

ಶ್ರೀ ಎಚ್. ಬಿ. ಜ್ವಾಲನಯ್ಯ.—ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ವಿಧೇಯಕ, 1969 ಮಸೂದೆಯನ್ನು ನಾನು ಮಂಡಿಸುತ್ತೇನೆ.

Mr. SPEAKER.—The Bill is introduced.

(B) Mysore Agricultural Produce Market Committee (Amendment) Bill, 1969

Consideration postponed

Sri K. H. PATIL.—Before submiting my Bill to the House I want to submit one thing. Since I am feeling that the President's assent is necessary for my amendment Bill, I request the Chair to withhold the consideration of it. I am moving the Government to obtain the consent of the President for my amendment Bill.

Mr. SPEAKER.—Yes.

Mysore Sales Tax (Amendment) Bill, 1969.

Motion to consider

ಶ್ರೀ ಎಚ್. ಬಿ. ಜ್ವಾಲನಯ್ಯ.—ಸ್ವಾಮಿ, ಮೈಸೂರು ರಾಜ್ಯದ ಮಾರಾಟ ತೆರಿಗೆಗೆ ಸಂಬಂಧಿಸಿದ ತಿದ್ದುಪಡಿಯ ವಿಧೇಯಕ, 1969ನ್ನು ಪರ್ಯಾಲೋಚಿಸಬೇಕೆಂದು ನಾನು ಸೂಚಿಸುತ್ತೇನೆ.

Mr. SPEAKER.—Motion moved :

"That the Mysore Sales Tax (Amendment) Bill, 1969, be taken into consideration."

† ಶ್ರೀ ಎಚ್. ಬಿ. ಜ್ವಾಲನಯ್ಯ.—ಸ್ವಾಮಿ, 1969ನೇ ಸೇಲ್ಸ್ ಟ್ಯಾಕ್ಸ್ ಬಿಲ್ಲನ್ನು ಇಲ್ಲಿ ತರುವುದಕ್ಕೆ ಮುಂಚೆ, ಮೈಸೂರು ಸಂಸ್ಥಾನದಲ್ಲಿ ಪಾನನಿರೋಧವನ್ನು ಜಾರಿಗೆ ತರುವುದರಿಂದ ನಷ್ಟವಾಗುತ್ತದೆ, ಆ ನಷ್ಟವನ್ನು ತುಂಬಿಕೊಳ್ಳುವುದಕ್ಕೋಸ್ಕರ ಈ ಮಾರಾಟ ತೆರಿಗೆ ತಿದ್ದುಪಡಿ ಮಸೂದೆಯನ್ನು ನಾವು ತರುತ್ತೇವೆಂದು ಸರ್ಕಾರದವರು ಈ ಸಭೆಯಲ್ಲಿ ಹಿಂದೆ ಹೇಳಿದ್ದು, ಆಗ ಆ ನಷ್ಟವನ್ನು ತುಂಬಿಕೊಳ್ಳುವದಕ್ಕೋಸ್ಕರವಾಗಿ ಈ ಸಭೆಯು ಅನುಮತಿಯನ್ನು ಕೊಟ್ಟಿದ್ದು ಈಗ ಮಹಾತ್ಮ ಗಾಂಧೀಜಿಯವರ ಶತಮಾನೋತ್ಸವದ ಸಲುವಾಗಿ ಪಾನನಿರೋಧವನ್ನು ರದ್ದುಗೊಳಿಸಿ ಅದರಲ್ಲಿಯೂ ಕೂಡ ಕೋಟ್ಯಾಂತರ ರೂಪಾಯಿಗಳಷ್ಟು ಆದಾಯ ಸರ್ಕಾರಕ್ಕೆ ಬರುವಂಥ ವ್ಯವಸ್ಥೆ ಆಗಿರುವುದು ನಮಗೆ ಗೊತ್ತಿದೆ. ಮೈಸೂರು ಸೇಲ್ಸ್ ಟ್ಯಾಕ್ಸ್ ಆಕ್ಟ್ 1957ನೇ 10ನೇ ನಿಯಮದ ಉಪನಿಯಮ (1)ರಲ್ಲಿ ಪ್ರತಿಯೊಬ್ಬ ಡೀಲರ್‌ಗೆ 10 ಸಾವಿರ ರೂಪಾಯಿಗಳಷ್ಟು ಟರ್ನ್‌ಓವರ್ ಟ್ಯಾಕ್ಸ್ ಲಿಮಿಟ್ ಎಂಬುದಾಗಿ ಇದೆ. ಇದಕ್ಕೆ ನಾನು ತಿದ್ದುಪಡಿಯನ್ನು ಸೂಚಿಸಿದ್ದೇನೆ. ಈ ವಿಧಿಯಲ್ಲಿ 10 ಸಾವಿರ ರೂಪಾಯಿಗಳು ಎನ್ನುವುದಕ್ಕೆ ಬದಲಾಗಿ 25 ಸಾವಿರ ರೂಪಾಯಿಗಳೆಂದು ಸೇರಿಸಬೇಕೆಂದು ಹೇಳಿದ್ದೇನೆ. ಈಗ ಮಹಾರಾಷ್ಟ್ರ, ರಾಜಸ್ಥಾನ, ಒರಿಸ್ಸಾ, ಮತ್ತು ಗುಜರಾತ್—ಈ ರಾಜ್ಯಗಳಲ್ಲಿ ಈ ಒಂದು ಮಾರಾಟ ತೆರಿಗೆಯ ನಿಯಮವನ್ನು ಬದಲಾಯಿಸಿ ಟರ್ನ್‌ಓವರ್ ಲಿಮಿಟ್ಟನ್ನು ಬಹಳವಾಗಿ ವ್ಯತ್ಯಾಸಪಡಿಸಿದ್ದಾರೆ. 1948ನೇ ಇಸವಿಯಲ್ಲಿ ಈ ಮಸೂದೆಯನ್ನು ತರುವ ಸಂದರ್ಭದಲ್ಲಿ ದೇಶದಲ್ಲಿರತಕ್ಕ ಎರ್ಲಾ ಪದಾರ್ಥಗಳ ಬೆಲೆಯನ್ನು ಈಗಿನ ಕಾಲಕ್ಕೆ ಹೋಲಿಸಿ ನೋಡಿದರೆ ಸುಮಾರು ನಾಲ್ಕೈದು ಪಟ್ಟು ಜಾಸ್ತಿಯಾಗಿದೆ. ಹಿಂದೆ 1968ನೇ ಇಸವಿಯಲ್ಲಿ 10 ಸಾವಿರ ರೂಪಾಯಿಗಳಷ್ಟು ಟರ್ನ್‌ಓವರ್ ಟ್ಯಾಕ್ಸ್ ಲಿಮಿಟ್ ಮಾಡಿಕೊಂಡಿದ್ದರು. ಈಗ ಸಾಮಾನುಗಳ ಮೌಲ್ಯ 40—50 ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಾಗಿದೆ. ಈಗಿರುವ ಕಾನೂನು ಪ್ರಕಾರ 10 ಸಾವಿರ